ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 691 |
| ಸದಸ್ಯರ ಹೆಸರು | : | ಶ್ರೀ ಟಿ.ಎ. ಶರವಣ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಉದ್ಘಾಟನೆ ಯಾದಾಗಿನಿಂದ ಇಲ್ಲಿಯವರೆಗೆ ನಡೆದ ಅಪಘಾತದಲ್ಲಿ ಮರಣ ಹೊಂದಿದವರ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು;</td><td>
ರಾಷ್ಟ್ರೀಯ ಹೆದ್ದಾರಿ-275ರ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿ ಹೆದ್ದಾರಿಯಲ್ಲಿ ಸಂಭವಿಸಿದ ಅಪಘಾತಗಳ ಕುರಿತು ಈ ಕೆಳಕಂಡಂತೆ ಸದರಿಯವರು ವರದಿಸಿರುತ್ತಾರೆ.
ರಾಷ್ಟ್ರೀಯ ಹೆದ್ದಾರಿ-275ರ ಎಕ್ಸ್‌ಪ್ರೆಸ್ ವೇ ಹೆದ್ದಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಸದರಿ ಹೆದ್ದಾರಿಯು ಉದ್ಘಾಟನೆಯಾದ ನಂತರದಲ್ಲಿ ಭಾಗದಲ್ಲಿ ಸಂಭವಿಸಿದ ಅಪಘಾತದ ವಿವರಗಳು ಈ ಕೆಳಕಂಡಂತಿದೆ.
(i) ಪ್ಯಾಕೇಜ್ – I ಬೆಂಗಳೂರು ನಿಂದ ನಿಡಘಟ್ಟ ವಿಭಾಗ
<table>
<tr><th>ಕ್ರ ಸಂ</th><th>ಮಾಹೆ</th><th>ಒಟ್ಟು ಅಪಘಾತ ಗಳು</th><th>ಮರಣ</th><th>ತೀವ್ರವಾಗಿ ಗಾಯ ಗೊಂಡವರು</th></tr>
<tr><td>1</td><td>ಮಾರ್ಚ್-23</td><td>38</td><td>13</td><td>43</td></tr>
<tr><td>2</td><td>ಏಪ್ರಿಲ್-23</td><td>41</td><td>11</td><td>60</td></tr>
<tr><td>3</td><td>ಮೇ-23</td><td>55</td><td>15</td><td>50</td></tr>
<tr><td>4</td><td>ಜೂನ್-23</td><td>28</td><td>03</td><td>35</td></tr>
<tr><td colspan="2">ಒಟ್ಟು</td><td>162</td><td>42</td><td>188</td></tr>
</table>
(i) ಪ್ಯಾಕೇಜ್ – II ನಿಡಘಟ್ಟ ದಿಂದ ಮೈಸೂರು ವಿಭಾಗ
<table>
<tr><th>ಕ್ರ ಸಂ</th><th>ಮಾಹೆ</th><th>ಒಟ್ಟು ಅಪಘಾತ ಗಳು</th><th>ಮರಣ</th><th>ತೀವ್ರವಾಗಿ ಗಾಯ ಗೊಂಡವರು</th></tr>
<tr><td>1</td><td>ಮಾರ್ಚ್-23</td><td>38</td><td>13</td><td>43</td></tr>
<tr><td>2</td><td>ಏಪ್ರಿಲ್-23</td><td>41</td><td>11</td><td>60</td></tr>
<tr><td>3</td><td>ಮೇ-23</td><td>55</td><td>15</td><td>50</td></tr>
<tr><td>4</td><td>ಜೂನ್-23</td><td>30</td><td>07</td><td>35</td></tr>
<tr><td colspan="2">ಒಟ್ಟು</td><td>164</td><td>46</td><td>188</td></tr>
<tr><td colspan="2">ಪ್ಯಾಕೇಜ್-1&2ರ ಒಟ್ಟು</td><td>326</td><td>88</td><td>376</td></tr>
</table>
</td></tr>
</table>

| | | |
|---|---|---|
| ಆ) | ಸದರಿ ಹೆದ್ದಾರಿಯು ಅವೈಜ್ಞಾನಿಕವಾಗಿ ನಿರ್ಮಾಣ ವಾಗಿದೆ ಎಂದು ಸಂಬಂಧಪಟ್ಟ ಸಚಿವರು ಇತ್ತೀಚೆಗೆ ಮಾಧ್ಯಮ ಗಳಲ್ಲಿ ತಿಳಿಸಿದ್ದು ನಿಜವೇ; ಅವೈಜ್ಞಾನಿಕವಾಗಿದ್ದಲ್ಲಿ ಅದಕ್ಕೆ ಸೂಕ್ತ ಆಧಾರಗಳು ಯಾವುವು; (ವಿವರ ನೀಡುವುದು) | ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್ ವೇ ಹೆದ್ದಾರಿಯನ್ನು IRC Specification and standard ಹಾಗೂ ಗುತ್ತಿಗೆ ಕರಾರಿನಂತೆ ಸ್ವತಂತ್ರ ಇಂಜಿನಿಯರ್‌ರವರ ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು, ಅವೈಜ್ಞಾನಿಕವಾಗಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲವೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಇ) | ಸದರಿ ಹೆದ್ದಾರಿಯಲ್ಲಿ ಸಂಚರಿಸುವ ಪ್ರಯಾಣಿಕರ ಸುರಕ್ಷತೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು: | ರಾಷ್ಟ್ರೀಯ ಹೆದ್ದಾರಿ-275 ರ ಬೆಂಗಳೂರಿನಿಂದ ಮೈಸೂರು ವಿಭಾಗದ ಪ್ರಯಾಣಿಕರ ಸುರಕ್ಷತೆಗಾಗಿ ರಸ್ತೆ ಸುರಕ್ಷತಾ ನಿಯಮದಂತೆ ಸೂಚನಾ ಫಲಕಗಳಾದ Speed Limit, No stopping, No Standing, No Parking, No overtaking, Lane discipline ಇತ್ಯಾದಿಗಳನ್ನು ಅಳವಡಿಸಲಾಗಿದೆ. ಅಲ್ಲದೆ, ರೋಡ್ ಮಾರ್ಕಿಂಗ್ ಮತ್ತು ಎಲ್ಲಾ ಗ್ರೇಡ್ ಜಂಕ್ಷನ್‌ಗಳ ಬಳಿ ಅಪಘಾತಗಳನ್ನು ತಪ್ಪಿಸಲು IRC ಮಾರ್ಗಸೂಚಿಯನ್ವಯ ಕೆಳ ಸೇತುವೆ / ಮೇಲ್ಸೇತುವೆಗಳನ್ನು ನಿರ್ಮಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಈ) | ಅಪಘಾತಗಳನ್ನು ತಡೆಯಲು ಹೆದ್ದಾರಿಯಲ್ಲಿ ಸೇಫ್ಟಿ ಆಡಿಟ್ ನಡೆಸುವ ಮೂಲಕ ವೈಜ್ಞಾನಿಕ ಅಧ್ಯಯನ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಂಭವಿಸುತ್ತಿರುವ ಅಪಘಾತಗಳನ್ನು ತಪ್ಪಿಸಲು ಈ ಕೆಳಕಂಡ ಹೆಚ್ಚುವರಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:<br>1 ಹೆಚ್ಚುವರಿ ವೇಗ ಮಿತಿ ಸೈನ್ ಬೋರ್ಡ್‌ಗಳು<br>2 ಪ್ರತಿ ಪ್ರವೇಶ ನಿರ್ಗಮನ ಸ್ಥಳದಲ್ಲಿ PTZ ಕ್ಯಾಮೆರಾ ಅಳವಡಿಕೆ<br>3 ಲೇನ್ ಶಿಸ್ತು ಗುರುತುಗಳು ಮತ್ತು ಸೈನ್ ಬೋರ್ಡ್‌ಗಳು<br>4 ಹೆದ್ದಾರಿಯಲ್ಲಿ ನೀರು ನಿಲ್ಲುವುದನ್ನು ತಪ್ಪಿಸಲು ಚರಂಡಿಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವುದು<br>5 ಪ್ರವೇಶ/ನಿರ್ಗಮನ ಸ್ಥಳಗಳಲ್ಲಿನ ಸರ್ವಿಸ್ ರಸ್ತೆಯಲ್ಲಿ ಸ್ಪೀಡ್ ಬ್ರೇಕರ್‌ಗಳನ್ನು ಅಳವಡಿಸುವುದು<br>6 ಹೆದ್ದಾರಿಯುದ್ದಕ್ಕೂ 24x7 ಹೆದ್ದಾರಿ ಗಸ್ತು ಮತ್ತು ಆಂಬುಲೆನ್ಸ್ ಸೌಲಭ್ಯ |

ಕಡತ ಸಂಖ್ಯೆ: ಲೋಇ 141 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು